

ಚಿತ್ರಗಳು: ಫಕ್ರುದ್ದೀನ್ ಎಚ್

# ‘ನೀವು ಮಂಗ್ಳೂರವರಾ…’

‘ನಮಸ್ಕಾರ, ಹೇಗಿದ್ದೀರಿ? ಊಟ ಆಯ್ತಾ’ ಅಂತ ಕೇಳುತ್ತಿದ್ದಂತೆ ಎದುರಿನಿಂದ ‘ನೀವು ಮಂಗ್ಳೂರಿನವರ’ ಅಂತ ಮರುಪ್ರಶ್ನೆ ಬಂದೇ ಬರುತ್ತದೆ. ‘ನಿಮ್ ಮಾತಲ್ಲೇ ತಿಳಿದುಬಿಡುತ್ತೆ ನೀವು ಮಂಗ್ಳೂರಿನವರು ಅಂತ’ ಎಂಬ ಉದ್ಗಾರ… ಮಂಗ್ಳೂರು ಕನ್ನಡ ಸ್ವಚ್ಛ ಮತ್ತು ಗ್ರಾಂಥಿಕ ಭಾಷೆ. ಕನ್ನಡ ವರ್ಣಮಾಲೆಯ ಎಲ್ಲ ಅಕ್ಷರಗಳನ್ನು ಮಾತಾಡುವಾಗ ಮತ್ತು ಬರವಣಿಗೆಯಲ್ಲಿ ಸರಿಯಾಗಿ ಉಪಯೋಗ ಮಾಡುವ ಸಾಮರ್ಥ್ಯ ಈ ಪ್ರದೇಶದ ಜನರಿಗೆ ಉಂಟು. ಮಂಗಳೂರು ಭಾಷೆಯ ಘಮಲನ್ನು ಈ ಬಾರಿ ತೆರೆದಿಟ್ಟಿದ್ದಾರೆ

ಕನ್ಸೆಪ್ಟಾ ಫೆರ್ನಾಂಡಿಸ್

ನಾನು ಆಕಾಶವಾಣಿಯ ಕಾರ್ಯಕ್ರಮ ವಿಭಾಗದಲ್ಲಿ 35 ವರ್ಷ, ಮೂರು ಕೇಂದ್ರಗಳಲ್ಲಿ ಕೆಲಸ ಮಾಡಿದೆ. ಹಾಗಾಗಿ ನಾನು ಮಾತಾಡುವಾಗ ಆಗಾಗ ಆಕಾಶವಾಣಿಯ ಪ್ರಸ್ತಾಪ ಬರಬಹುದು. ತಪ್ಪು ತಿಳಿಯಬೇಡಿ.

‘ನಮಸ್ಕಾರ, ಹೇಗಿದ್ದೀರಿ? ಊಟ ಆಯ್ತಾ’ ಅಂತ ನನ್ನ ಬಾಯಿಯಿಂದ ಎರಡು ಶಬ್ದ ಹೊರಗೆ ಬೀಳುವಾಗ್ಲೇ ‘ನೀವು ಮಂಗ್ಳೂರಾ’ ಅಂತ ಬೆಂಗ್ಳೂರಿನಲ್ಲಿ ಕೆಲವರು ಕೇಳುತ್ತಾರೆ. ಅಬ್ಬಬ್ಬಾ, ಅಷ್ಟು ಬೇಗ ಇವರಿಗೆ ಹೇಗೆ ಗೊತ್ತಾಗ್ತದೆ ಅಂತ ನಾನು ಯೋಚನೆ ಮಾಡುವಾಗ, ‘ನಿಮ್ಮ ಮಾತಲ್ಲೇ ತಿಳಿಯತ್ತೆ’ ಅಂತಾರೆ. ನನಗೆ ಮಾತ್ರ ಅವರು ಮಾತಾಡುವ ರೀತಿಯಿಂದ ಅವರು ಯಾವ ಊರಿನವರು ಅಂತ ಗೊತ್ತಾಗುವುದೇ ಇಲ್ಲ. ಇರಲಿ, ಇನ್ನು ನೇರವಾಗಿ ವಿಷಯಕ್ಕೆ ಬರುವ.

ನಮ್ದು ಕೇಂದ್ರ ಸರ್ಕಾರದ ಸಂಸ್ಥೆ. ವರ್ಗಾವಣೆ ಅನಿವಾರ್ಯ. ಮಂಗ್ಳೂರಿನಿಂದ ವರ್ಗಾವಣೆಯಾಗಿ ಬೆಂಗ್ಳೂರಿಗೆ ಬರಬೇಕಾಯಿತು. ಬೇಕಂತ ಕೇಳಿ ನಾನು ಬೆಂಗ್ಳೂರಿಗೆ ಬಂದದ್ದಲ್ಲ. ವರ್ಗಾವಣೆಯನ್ನು ತಪ್ಪಿಸಿಕೊಂಡು ಒಂದೇ ಊರಿನಲ್ಲಿ, ಒಂದೇ ಕಚೇರಿಯಲ್ಲಿ ಉಳಿದುಕೊಳ್ಳುವ ಕಲೆ ಕೆಲವರಿಗೆ ಮಾತ್ರ ಗೊತ್ತಿರ್ತದೆ. ನನಗೆ ಅದು ಗೊತ್ತಿರಲಿಲ್ಲ ಅಂತ ಇಟ್ಟುಕೊಳ್ಳಿ.

ಬೆಂಗ್ಳೂರಿಗೆ ಬಂದ ಮೇಲೆ ಉಳಕೊಳ್ಳಲಿಕ್ಕೆ ಒಂದು ವ್ಯವಸ್ಥೆ ಆಗಬೇಕಲ್ವ? ಎಲ್ಲಾದ್ರೂ ಬಾಡಿಗೆ ಮನೆ ಉಂಟಾ ಅಂತ ಸಹೋದ್ಯೋಗಿಗಳನ್ನು ಕೇಳುವಾಗ ಒಬ್ಬರು ‘ಅಲ್ಲೊಂದು ರೂಮ್ ಐತೆ. ಬೇಕಾದ್ರೆ ನೋಡಿ’ ಅಂದ್ರು. ಈ ಐತೆ ಅನ್ನುವುದು ಯಾವ ಸೀಮೆಯ ಭಾಷೆಯ ಶಬ್ದ ಅಂತ ಗೊತ್ತಾಗ್ಲಿಲ್ಲ.

ಕಚೇರಿಯಲ್ಲಿ ನನಗೆ ಸಹಾಯಕ್ಕೆ ಅಂತ ಅರೆಕಾಲಿಕ ಸಿಬ್ಬಂದಿಯೊಬ್ಬರು ನನ್ನ ವಿಭಾಗದಲ್ಲಿ ಇದ್ರು. ಅವರು ಒಂದು ದಿನ ಕೂಡ ಸಮಯಕ್ಕೆ ಸರಿಯಾಗಿ ಬರ್ತಿರ್ಲಿಲ್ಲ. ಅವರ ಮೊಬೈಲ್‌ಗೆ ಫೋನ್ ಮಾಡಿದ್ರೆ ‘ಇಲ್ಲೇ ಬತ್ತಾ ಇವ್ನಿ ಮೇಡಂ, ಹತ್ತು ನಿಮಿಷ, ಟ್ರಾಫಿಕ್‌ನಲ್ಲೀದ್ದೀನಿ’ ಅಂತ ಯಾವಾಗಲೂ ಹೇಳ್ತಿದ್ರು. ಒಂದೊಂದು ಸಲ ಆ ಹತ್ತು ನಿಮಿಷ ಒಂದು ಗಂಟೆಯವರೆಗೂ ಹೋಗ್ತಿತ್ತು. ಅವರನ್ನು ಕಾಯುವ ತಾಳ್ಮೆ ಇಲ್ಲದೆ ಅಥವಾ ಕಾಯ್಻ಕ್ಕೆ ಪುರುಸೊತ್ತಿಲ್ದೆ ಎಷ್ಟೋ ಸಲ ಅವರು ಮಾಡಬೇಕಾದ ಕೆಲಸವನ್ನು ನಾನೇ ಮಾಡಿದ್ದೂ ಉಂಟು. ಇದು ಹೀಗೇ ಸುಮಾರು ಆರು ತಿಂಗಳವರೆಗೂ ನಡೆಯಿತು. ಏನೋ ವಿಷಯ ಬಂದಾಗ ಒಂದು ಸಲ ಮತ್ತೊಬ್ಬ ಹಿರಿಯ ಸಹೋದ್ಯೋಗಿಯ ಹತ್ರ ಈ ವಿಷಯ ಹೇಳಿದೆ. ‘ಅಯ್ಯೋ, ಆ ಮನುಷ್ಯ ಎಷ್ಟು ವರ್ಷಗಳಿಂದ ಬರ್ತಿದ್ದಾರೆ. ಆದರೆ ಸಮಯಕ್ಕೆ ಸರಿಯಾಗಿ ಬಂದ ದಾಖಲೆಯೇ ಇಲ್ಲ. ನೀವೇ ಅವರಿಗೆ ಅಡ್ಜಸ್ಟ್ ಮಾಡಿಕೊಂಡು ಹೋಗ್ಬೇಕು, ನೀವು ಫೋನ್ ಮಾಡಿದ ನಂತರ ಅವರು ಮನೆಯಿಂದ ಹೊರಡ್ತಾರೆ’ ಎಂದರು.

ಹೀಗೂ ಉಂಟಾ ಮಾರಾಯ್ರೇ?